


# ಮೊಬೈಲ್ ಎಸೆಯುವಾಟ!

ಗುಂಡೆಸೆತ ಕೇಳಿದ್ದೇವೆ. ಮೊಬೈಲ್ ಎಸೆತ ಕೇಳಿದ್ದೀರಾ? ಇದೊಂದು ವಿಚಿತ್ರ ಸ್ಪರ್ಧೆ. ನಡೆದದ್ದು ದೂರದ ಫಿನ್ಲೆಂಡ್‌ನಲ್ಲಿ. ಇದರಲ್ಲಿ ಭಾಗವಹಿಸುವ ಸ್ಪರ್ಧಾಳುಗಳಲ್ಲಿ ಅತೀ ದೂರಕ್ಕೆ ಮೊಬೈಲ್ ಎಸೆಯುವ ಸ್ಪರ್ಧಾಳುವನ್ನು ವಿಜಯೀ ಎಂದು ನಿರ್ಧರಿಸಿ ಬಹುಮಾನ ನೀಡಲಾಗುತ್ತದೆ. ಗುಂಡೆಸೆತ (ಶಾಟ್‌ಪುಟ್) ತರಹ.

ಫಿನ್ಲೆಂಡ್‌ನ ಸಾವೊನ್ಲಿನಾ ನಗರದಲ್ಲಿ ಬಹಳ ಹಿಂದಿನಿಂದಲೂ ಈ ಸ್ಪರ್ಧೆ ಏರ್ಪಡಿಸಲಾಗುತ್ತಿತ್ತು. ಆದರೆ ಇತ್ತೀಚೆಗೆ ಅಮೆರಿಕ, ಸ್ಪೇನ್ ಹಾಗೂ ಯೂರೋಪಿನಾದ್ಯಂತ ಈ ಸ್ಪರ್ಧೆಗಳನ್ನು ಆಯೋಜಿಸಲಾಗುತ್ತಿದ್ದು ಜನರಿಂದಲೂ ಅಭೂತಪೂರ್ವ ಬೆಂಬಲ ವ್ಯಕ್ತವಾಗುತ್ತಿದೆ.

ಸ್ಪರ್ಧೆಯಲ್ಲಿ ಭಾಗವಹಿಸುವ ಸ್ಪರ್ಧಿಗಳು ತಮ್ಮ ಬೆಲೆಬಾಳುವ ಮೊಬೈಲ್‌ಗಳನ್ನು ಎಸೆಯುವ ಅವಶ್ಯಕತೆಯಿರುವುದಿಲ್ಲ. ಬದಲಿಗೆ ಆಯೋಜಕರೇ ಮೊಬೈಲ್‌ಗಳನ್ನು ಒದಗಿಸುತ್ತಾರೆ. ಇಂಥಾ ಸ್ಪರ್ಧೆಗಳಿಗೆ ಹಳೆಯದಾದ, ಬಳಸಲು ಯೋಗ್ಯವಾಗಿಲ್ಲದ ಮೊಬೈಲ್‌ಗಳನ್ನು ಬಳಸಲಾಗುತ್ತಿದ್ದು ಅವುಗಳನ್ನು ಒದಗಿಸಲೆಂದೇ ಪ್ರತಿಷ್ಠಿತ ಮೊಬೈಲ್ ಕಂಪನಿಗಳು ನಾ ಮುಂದು ತಾ ಮುಂದು ಎಂದು ಮುಗಿಬೀಳುತ್ತವೆಯಂತೆ. 220 ರಿಂದ 400 ಗ್ರಾಂಗಳಷ್ಟು ತೂಕವುಳ್ಳ ಅನೇಕ ವಿಧದ ಮೊಬೈಲ್‌ಗಳನ್ನು ಈ ಸಂದರ್ಭದಲ್ಲಿ ಒದಗಿಸಲಾಗುತ್ತಿದ್ದು, ಸ್ಪರ್ಧಾಳುಗಳು ಅವುಗಳಲ್ಲಿ ಬೇಕಾದದ್ದನ್ನು ಆಯ್ದುಕೊಂಡು ಸ್ಪರ್ಧೆಯಲ್ಲಿ ಭಾಗವಹಿಸಬಹುದು.

ವಿಜೇತರಿಗೆ ದೊಡ್ಡಮಟ್ಟದ ನಗದು ಪುರಸ್ಕಾರ ಹಾಗೂ ಗೌರವವನ್ನು ಕೊಡಲಾಗುತ್ತದೆ. ಈ ಸ್ಪರ್ಧೆಯಲ್ಲಿಯೂ ಅನೇಕ ವಿಭಾಗಗಳಿದ್ದು 12 ವರ್ಷಕ್ಕೂ ಚಿಕ್ಕ ಮಕ್ಕಳಿಗಾಗಿ ಜೂನಿಯರ್ ಚಾಂಪಿಯನ್‌ಶಿಪ್ ಸ್ಪರ್ಧೆಗಳನ್ನೂ ಆಯೋಜಿಸಲಾಗುತ್ತಿದೆ.

ಸದ್ಯದ ಜಗತ್ತಿನ ಉತ್ತಮ ಮೊಬೈಲ್ ಎಸೆತಗಾರನೆಂಬ ವಿಶ್ವದಾಖಲೆಯು ಬೆಲ್ಜಿಯಂನ ಡ್ರೈಯೀಸ್ ಫೆರಿಮಾನ್ಸ್ ಹೆಸರಿನಲ್ಲಿದ್ದು, ಅವರು ಪುರುಷರ ವಿಭಾಗದಲ್ಲಿ 110.42 ಮೀಟರುಗಳಷ್ಟು ದೂರದವರೆಗೆ ಎಸೆದ ದಾಖಲೆಯನ್ನು ಹೊಂದಿದ್ದಾರೆ. ಮಹಿಳಾ ವಿಭಾಗದಲ್ಲಿ 53.52 ಮೀಟರ್ ದಾಖಲೆಯು ಜಾನ್ ಸಿಂಗ್ಲೆಟಾನ್ ಹೆಸರಿನಲ್ಲಿದೆ.



■ ಪ.ನಾ.ಹಳ್ಳಿ ಹರೀಶ್‌ಕುಮಾರ್